# ಕ್ರಿಯೇಟಿವ್ ಕಾಮನ್ಸ್ ಪರವಾನಗಿ
# (Creative Commons license)

ಒಂದು ಕ್ರಿಯೇಟಿವ್ ಕಾಮನ್ಸ್ (ಸಿಸಿ ಅಥವಾ CC) ಪರವಾನಗಿಯು ಸಾರ್ವಜನಿಕ ಹಕ್ಕುಸ್ವಾಮ್ಯ ಪರವಾನಗಿಗಳಲ್ಲಿ ಒಂದಾಗಿದೆ. ಇದು ಹಕ್ಕುಸ್ವಾಮ್ಯದ "ಕೆಲಸ"ದ ಮುಕ್ತ ವಿತರಣೆಯನ್ನು ಸಕ್ರಿಯಗೊಳಿಸುತ್ತದೆ. ಒಬ್ಬರು ಲೇಖಕರು ಇತರರಿಗೆ ಅವರು ರಚಿಸಿದ ಕೆಲಸಗಳನ್ನು ಹಂಚಿಕೊಳ್ಳುವ, ಬಳಸುವ, ಮತ್ತು ಮರುನಿರ್ಮಿಸುವ ಹಕ್ಕನ್ನು ನೀಡಲು ಬಯಸಿದಾಗ CC ಪರವಾನಗಿಯನ್ನು ಬಳಸಲಾಗುತ್ತದೆ.
ನಿಮ್ಮ ಕೆಲಸವನ್ನು CC ನಿಯಮಗಳಡಿಯಲ್ಲಿ ಪ್ರಕಟಿಸಲು ನೀವು ಆಯ್ಕೆಮಾಡುವ ಆರು ಪ್ರಮುಖ ಕ್ರಿಯೇಟಿವ್ ಕಾಮನ್ಸ್ ಪರವಾನಗಿಗಳಿವೆ. ಆರು CC ಪರವಾನಗಿಗಳು ನಾಲ್ಕು ಷರತ್ತುಗಳನ್ನು ಆಧರಿಸಿವೆ. ನಾಲ್ಕು ಷರತ್ತುಗಳು ಮತ್ತು ಆರು ಪರವಾನಗಿಗಳನ್ನು ಕೆಳಗೆ ವಿವರಿಸಲಾಗಿದೆ.
ಕ್ರಿಯೇಟಿವ್ ಕಾಮನ್ಸ್ ನ ಪರವಾನಗಿಗಳಲ್ಲಿ ವಿವಿಧ ವಿಧಗಳಿವೆ. ಅವುಗಳನ್ನು ಈ ಕೆಳಗೆ ಪಟ್ಟಿಮಾಡಲಾಗಿದೆ.

**Attribution**
**CC BY**

ಈ ಪರವಾನಗಿಯು ಮೂಲ ವಸ್ತುಗಳನ್ನು ಸೃಷ್ಟಿ ಮಾಡಿದವರಿಗೆ ಕ್ರೆಡಿಟ್ ಕೊಟ್ಟು, ಮೂಲ ಸೃಷ್ಟಿಯನ್ನು ತಿರುಚಲು, ವಿತರಿಸಲು ಮತ್ತು ಮರು ಮಿಶ್ರಣ ಮಾಡಲು ಜೊತೆಗೆ ವಾಣಿಜ್ಯಿಕವಾಗಿ ಬಳಸಲೂ ಅವಕಾಶ ಮಾಡಿಕೊಡುತ್ತದೆ. ಇದನ್ನು ಹೆಚ್ಚಿನ ಸ್ಥಳಗಳಲ್ಲಿ ಬಳಕೆ ಮಾಡಲಾಗುತ್ತಿದೆ. ಪರವಾನಗಿ ಪಡೆದ ವಸ್ತುಗಳ ಗರಿಷ್ಠ ಪ್ರಸರಣ ಮತ್ತು ಬಳಕೆಗೆ ಶಿಫಾರಸು ಮಾಡಲಾಗಿದೆ.
ಪರವಾನಗಿ ಪತ್ರ - https://creativecommons.org/licenses/by/4.0/

**Attribution-ShareAlike**
**CC BY-SA**

ಈ ಪರವಾನಗಿಯು ಮೂಲ ವಸ್ತುಗಳನ್ನು ಸೃಷ್ಟಿ ಮಾಡಿದವರಿಗೆ ಕ್ರೆಡಿಟ್ ಕೊಟ್ಟು, ಮೂಲ ಸೃಷ್ಟಿಯನ್ನು ತಿರುಚಲು, ವಿತರಿಸಲು ಮತ್ತು ಮರು ಮಿಶ್ರಣ ಮಾಡಲು ಜೊತೆಗೆ ವಾಣಿಜ್ಯಿಕವಾಗಿ ಬಳಸಲೂ ಅವಕಾಶ ಮಾಡಿಕೊಡುತ್ತದೆ. ಆ ರೀತಿ ಮಾಡುವಾಗ ಮೂಲ ಸೃಷ್ಟಿಯ ಪರವಾನಗಿಯನ್ನೇ ಹೊಸ ಸೃಷ್ಟಿಗೂ ನೀಡಬೇಕು. ಈ ಪರವಾನಗಿಯನ್ನು "ಹಕ್ಕು ಸ್ವಾಮ್ಯ ಮುಕ್ತ" ಮತ್ತು ಮುಕ್ತ ಹಾಗೂ ಸ್ವತಂತ್ರ ಸಾಫ್ಟ್‌ವೇರ್ ಗಳಿಗೆ ಹೋಲಿಸಲಾಗುತ್ತದೆ. ಇದರ ಪ್ರಕಾರ ಮೂಲ ಸೃಷ್ಟಿಯನ್ನು ಉಪಯೋಗಿಸಿಕೊಂಡು ಹೊಸ ಸೃಷ್ಟಿಯನ್ನು ಸೃಷ್ಟಿಸಿದರೆ ಮೂಲ ಸೃಷ್ಟಿಯ ಪರವಾನಗಿಯಲ್ಲಿಯೇ ಹೊಸ ಸೃಷ್ಟಿಯನ್ನು ಬಿಡುಗಡೆಗೊಳಿಸಬೇಕು. ಹಾಗಾಗಿ ಅವುಗಳ ಉತ್ಪನ್ನಗಳನ್ನೂ ವಾಣಿಜ್ಯಿಕವಾಗಿ ಬಳಸಬಹುದು. ಇದನ್ನು ಮುಖ್ಯವಾಗಿ ವಿಕಿಪೀಡಿಯದಲ್ಲಿ ಬಳಸಲಾಗುತ್ತದೆ. ಇದನ್ನು ವಿಕಿಪೀಡಿಯದಂತಹ ಇತರ ಉತ್ತಮ ಮಾಧ್ಯಮಗಳಲ್ಲಿ ಬಳಸಲು ಸೂಚಿಸಲಾಗಿದೆ.
ಪರವಾನಗಿ ಪತ್ರ - https://creativecommons.org/licenses/by-sa/4.0/

**Attribution-NoDerivs**
**CC BY-ND**

ಈ ಪರವಾನಗಿಯು ಮೂಲ ಸೃಷ್ಟಿಸಿದವರಿಗೆ ಕ್ರೆಡಿಟ್ ನೀಡಿ ಮೂಲ ಸೃಷ್ಟಿಯಲ್ಲಿ ಯಾವುದೇ ಬದಲಾವಣೆ ಮಾಡದೇ ವಾಣಿಜ್ಯಿಕ ಮತ್ತು ವಾಣಿಜ್ಯೇತರ ಕೆಲಸಗಳಿಗೆ ಬಳಸಿಕೊಳ್ಳಲು ಅನುವುಮಾಡಿಕೊಡುತ್ತದೆ.
ಪರವಾನಗಿ ಪತ್ರ - https://creativecommons.org/licenses/by-nd/4.0/

**Attribution-NonCommercial**

## CC BY-NC

ಈ ಪರವಾನಗಿಯು ಮೂಲ ವಸ್ತುಗಳನ್ನು ಸೃಷ್ಟಿ ಮಾಡಿದವರಿಗೆ ಕ್ರೆಡಿಟ್ ಕೊಟ್ಟು, ಮೂಲ ಸೃಷ್ಟಿಯನ್ನು ತಿರುಚಲು, ವಿತರಿಸಲು ಮತ್ತು ಮರು ಮಿಶ್ರಣ ಮಾಡಲು ಜೊತೆಗೆ ವಾಣಿಜ್ಯೇತರವಾಗಿ ಬಳಸಲು ಅವಕಾಶ ಮಾಡಿಕೊಡುತ್ತದೆ. ಮೂಲ ಸೃಷ್ಟಿಯನ್ನು ಬಳಸಿ ಸೃಷ್ಟಿಸಿದ ಇತರ ಕೆಲಸಗಳನ್ನು ಖಡ್ಡಾಯವಾಗಿ ವಾಣಿಜ್ಯೇತರ ಕೆಲಸಗಳಿಗಷ್ಟೇ ಬಳಕೆಮಾಡಬಹುದಾಗಿದೆ. ಆದರೆ ಮೂಲ ಸೃಷ್ಟಿಯ ಪರವಾನಗಿಯನ್ನೇ ಹೊಂದಿರಬೇಕೆಂದಿಲ್ಲ.

ಪರವಾನಗಿ ಪತ್ರ - https://creativecommons.org/licenses/by-nc/4.0/

## Attribution-NonCommercial-ShareAlike
## CC BY-NC-SA

ಈ ಪರವಾನಗಿಯು ನಿಯಮ ಮೂಲ ವಸ್ತುಗಳನ್ನು ಸೃಷ್ಟಿ ಮಾಡಿದವರಿಗೆ ಕ್ರೆಡಿಟ್ ಕೊಟ್ಟು, ಮೂಲ ಸೃಷ್ಟಿಯನ್ನು ತಿರುಚಲು, ವಿತರಿಸಲು ಮತ್ತು ಮರು ಮಿಶ್ರಣ ಮಾಡಲು ಜೊತೆಗೆ ವಾಣಿಜ್ಯೇತರವಾಗಿ ಬಳಸಲೂ ಅವಕಾಶ ಮಾಡಿಕೊಡುತ್ತದೆ. ಆ ರೀತಿ ಮಾಡುವಾಗ ಮೂಲ ಸೃಷ್ಟಿಯ ಪರವಾನಗಿಯನ್ನೇ ಹೊಸ ಸೃಷ್ಟಿಗೂ ನೀಡಬೇಕು.

ಪರವಾನಗಿ ಪತ್ರ - https://creativecommons.org/licenses/by-nc-sa/4.0/

## Attribution-NonCommercial-NoDerivs
## CC BY-NC-ND

ಈ ಪರವಾನಗಿಯು ಮೇಲಿನ ಆರು ಪರವಾನಿಗೆಗಳಿಂದ ಹೆಚ್ಚಿನ ನಿರ್ಬಂಧಗಳನ್ನು ಹಾಕುತ್ತದೆ. ಇದು ಯಾವುದೇ ಕೆಲಸವನ್ನು ಡೌನ್ಲೋಡ್ ಮಾಡಿಕೊಳ್ಳಲು ಅನುಮತಿಸುತ್ತದೆ. ಅದನ್ನು ಯಾವುದೇ ರೀತಿಯಲ್ಲಿ ವಾಣಿಜ್ಯಿಕವಾಗಿ ಬಳಸಿಕೊಳ್ಳಲು ಅನುಮತಿ ನೀಡುವುದಿಲ್ಲ. ಜೊತೆಗೆ ಇದು ಮೂಲ ಸೃಷ್ಟಿಯಲ್ಲಿ ಯಾವುದೇ ರೀತಿಯ ಬದಲಾವಣೆಗಳನ್ನು ಮಾಡುವುದನ್ನು ನಿರ್ಬಂಧಿಸುತ್ತದೆ.

ಪರವಾನಗಿ ಪತ್ರ - https://creativecommons.org/licenses/by-nc-nd/4.0/

## Public Domain

ಈ ಪರವಾನಗಿಯು ಮುಕ್ತಜ್ಞಾನದ ಪರವಾನಗಿಯಾಗಿದೆ. ಇದನ್ನು ಯಾರು ಬೇಕಾದರೂ ಯಾವ ಕೆಲಸಗಳಿಗೆ ಬೇಕಾದರೂ ಯಾವುದೇ ರೀತಿಯಲ್ಲಿ ಬಳಸಬಹುದಾಗಿದೆ.

ಪರವಾನಗಿ ಪತ್ರ - https://creativecommons.org/publicdomain/zero/1.0/

This document produced by CIS-A2K team. Above logo is produced by Subhashish Panigrahi. Centre for Internet And Society logo description [Public domain]. For more information about the program visit https://cis-india.org/a2k.